‘‘ಕಿಚ್ ಕಿಚ್ ಕಿಚ್...’’ ಕೂಗು ಅಥವಾ ಚಲಿಸುವ ಸದ್ದು ರಾಜೇಶನನ್ನು ಕದಡುತ್ತಿದ್ದವು. ಈ ಮಧ್ಯೆ ಲಾಕ್‌ಡೌನ್ ಹಂತ ಬದಲಿಸಿಕೊಳ್ಳುತ್ತಾ ವಾರಕ್ಕೆ ಮೂರ್ನಾಲ್ಕು ದಿನ ಬ್ಯಾಂಕಿಗೆ ಹೋಗಬೇಕಾಗಿ ಬಂತು. ಹಾಳು ಹಲ್ಲಿ ಓಡಾಡಿಕೊಂಡಿರಲಿ ಎಂದು ಲೈಟ್ ಆಫ್ ಮಾಡಿಯೇ ಬ್ಯಾಂಕಿಗೆ ಹೋಗಿ ಸಂಜೆ ವಾಪಸು ಬಂದ ಕೂಡಲೇ ಲೈಟ್ ಹಾಕಿ ಮೈಯೆಲ್ಲಾ ಕಣ್ಣಾಗಿ ಕಿವಿಯಾಗಿ ದಿಟ್ಟಿಸುತ್ತಿದ್ದ. ಸದ್ಯ ಇನ್ನೂ ತಾನು ಮಲಗುವ ರೂಮಿಗೆ ಬಂದಿಲ್ಲ ಎಂದು ನೆಮ್ಮದಿ ಇದ್ದರೂ ಪೂರಾ ಖಾತ್ರಿಯಿರಲಿಲ್ಲ. ಹೀಗಾಗಿ ಕೆಲವೊಮ್ಮೆ ಮೈಮೇಲೆ ಏನೋ ಸರಿದಂತಾಗಿ, ಮಧ್ಯರಾತ್ರಿ ನಿದ್ದೆಯಿಂದ ಧಡಾರನೆ ಎದ್ದು ಕುಳಿತು, ಅದು ಭ್ರಮೆಯಷ್ಟೇ ಎಂದು ಮನವರಿಕೆಯಾಗಿ ಬಾತ್‌ರೂಮಿಗೆ ಹೋಗುವ ಅಗತ್ಯ ಅದುಮಿಟ್ಟು ಮಲಗುತ್ತಿದ್ದ.

